## ನಾಳೆ ಮುಖ್ಯಮಂತ್ರಿ ಮನೆಗೆ ಮುತ್ತಿಗೆ: ಪುಟ್ಟಸ್ವಾಮಿಗೌಡ

ಮೂಡಿಗೆರೆ: ಇದೇ 25ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿದೆ ಎಂದು ರಾಜ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷ ದಾರದಹಳ್ಳಿ ಪುಟ್ಟಸ್ವಾಮಿಗೌಡ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ರೈತರ ಸಾಲಮನ್ನಾ ಮಾಡುವಂತೆ ಆಗ್ರಹಿಸಿ 16ರಿಂದ ಬೆಂಗಳೂರಿನ ಗಾಂಧಿ ಪ್ರತಿಮೆ ಬಳಿ ಧರಣಿ ಸತ್ಯಾಗ್ರಹ ನಡೆಯುತ್ತಿದ್ದರೂ, ಸರ್ಕಾರ ಯಾವುದೇ ಪ್ರತಿನಿಧಿಯನ್ನು ಸ್ಥಳಕ್ಕೆ ಕಳುಹಿಸಿಲ್ಲ.

ಧರಣಿ ನಿರತರ ಸಮಸ್ಯೆಯನ್ನೂ ಆಲಿಸಿಲ್ಲ. ಆದ್ದರಿಂದ ಸರ್ಕಾರಕ್ಕೆ ಎಚ್ಚರಿಕೆ ನೀಡುವ ಸಲುವಾಗಿ 25ರಂದು ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿಯ ಮನೆಗೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿದ್ದು, ಜಿಲ್ಲೆಯಿಂದಲೂ ಸಂಘಟನೆಯ ಕಾರ್ಯಕರ್ತರು ತೆರಳಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ನಾಳೆ ಮೆಸ್ಕಾಂ ಜನಸಂಪರ್ಕ ಸಭೆ

ಮಂಗಳೂರು: ಮೆಸ್ಕಾಂ ಶೃಂಗೇರಿ ಉಪವಿಭಾಗ ಕಚೇರಿಯಲ್ಲಿ ಇದೇ 25 ರಂದು ಬೆಳಿಗ್ಗೆ 10.30ಕ್ಕೆ ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ.

ಸಭೆಯಲ್ಲಿ ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದು, ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಸ್ವೀಕರಿಸುವರು.

ಗ್ರಾಹಕರು ಪ್ರಯೋಜನ ಪಡೆಯಲು ಮೆಸ್ಕಾಂ ಪ್ರಕಟಣೆ ಕೋರಿದೆ. ಮಾಹಿತಿಗೆ ಮೊ.ಸಂ. 9480841345 ಇಲ್ಲಿ ಸಂಪರ್ಕಿಸಬಹುದು.

### ರಾಜ್ಯದ ಕೃಷಿಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಅಭಿಮತ

# ಕೃಷಿ ಉತ್ಪನ್ನಗಳಿಗೆ ಸ್ಥಿರ ಬೆಲೆ ಅಗತ್ಯ

ಪ್ರಜಾವಾಣಿ ವಾರ್ತೆ

ಶೃಂಗೇರಿ: ರೈತರು ಬೆಳೆಯುವ ಉತ್ಪನ್ನಗಳಿಗೆ ಸ್ಥಿರ ಹಾಗೂ ಲಾಭದಾಯಕ ಬೆಲೆ ಸಿಗಲು ಸರ್ಕಾರ ಮಧ್ಯ ಪ್ರವೇಶ ಮಾಡಬೇಕು. ಕೃಷಿ ಮಾರುಕಟ್ಟೆಯನ್ನು ಸ್ಪರ್ಧಾತ್ಮಕಗೊಳಿಸಿ ಉತ್ಪನ್ನಗಳಿಗೆ ಉತ್ತಮ ಧಾರಣೆ ನೀಡುವ ನಿಟ್ಟಿನಲ್ಲಿ ಇ-ಮಾರುಕಟ್ಟೆ, ಭವಿಷ್ಯದ ಮಾರುಕಟ್ಟೆ, ವಾಯಿದೆ ವ್ಯಾಪಾರ, ಬೆಲೆ ಪರಿಶೀಲನೆ ತಡೆಬ್ಬುವಿಕೆ ಮೊದಲಾದವುಗಳ ಉಪಯೋಗ ನೇರವಾಗಿ ಕೃಷಿಕರಿಗೆ ಸಿಗಬೇಕು ಎಂದು ರಾಜ್ಯದ ಕೃಷಿಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ ತಿಳಿಸಿದರು.

ಶೃಂಗೇರಿ ತಾಲ್ಲೂಕಿನ ಆನೆಗುಂದದ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಸೋಮವಾರ 'ಅಡಿಕೆ ಮತ್ತು ಉಪಬೆಳೆಗಳಿಗೆ ಆಧುನಿಕ ಮಾರುಕಟ್ಟೆ ವಿಧಗಳು' ಕುರಿತ ತಾಂತ್ರಿಕ ಕಾರ್ಯಾಗಾರದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ಮಾರುಕಟ್ಟೆ ವ್ಯವಹಾರದಲ್ಲಿ ರೈತರು ಏಕಾಂಗಿಯಾಗಿ ಹೋರಾಟ ಮಾಡುತ್ತಿದ್ದು ಅವರು ಸಾಂಘಿಕವಾಗಿ ಒಗ್ಗೂಡಿ ಕಾರ್ಯ ನಿರ್ವಹಿಸಬೇಕಿದೆ. ಸಣ್ಣ ಮತ್ತು ಅತಿಸಣ್ಣ ರೈತರನ್ನು ಕೃಷಿ ಮಾರುಕಟ್ಟೆಯ ಶೋಷಣೆಯಿಂದ ರಕ್ಷಿಸಬೇಕಾಗಿದೆ. ಕೃಷಿ ಬೆಲೆ ಆಯೋಗವು ಸಿದ್ಧಪಡಿಸಿದ ಅಡಿಕೆ ಬೆಳೆಯ ಮಾಹಿತಿಯ ಆಧಾರದ ಮೇಲೆ ಕೇಂದ್ರ ಸರ್ಕಾರವು ಬೆಂಬಲಬೆಲೆ ಘೋಷಿಸಿದೆ. ಇದರಿಂದ ರೈತರು ಆರ್ಥಿಕವಾಗಿ ಕೊಂಚ ಸುಧಾರಣೆಯನ್ನು ಕಂಡಿದ್ದಾರೆ. ಕಾಳುಮೆಣಸಿಗೆ ಪ್ರಸ್ತುತ ಜಾಗತಿಕ ಮಾರುಕಟ್ಟೆ ಇದೆ. ಮಾರುಕಟ್ಟೆಯನ್ನು ರೈತ ಸಂಘಟನೆಗಳು ಕೈವಶ ಮಾಡಿಕೊಳ್ಳಬೇಕಾಗಿದೆ. ಮಲನಾಡಿನ ಜೇರಿಗೆ, ಮೆಣಸುಗಳಿಗೆ ಬೇಡಿಕೆ ಇದ್ದು ರೈತರು ಅದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕಾಗಿದೆ ಎಂದರು.

ಕ್ಷೇತ್ರದಲ್ಲಿ ವ್ಯಾಪಕವಾಗಿ ಅಡಿಕೆಗೆ ಹಳದಿ ಎಲೆರೋಗ ಹರಡಿರುವುದರಿಂದ ಪರ್ಯಾಯ ಬೆಳೆ ಬೆಳೆಸಬೇಕು. ಏಕೆಂದರೆ ಹಳದಿ ಎಲೆ ರೋಗದ ಬಗ್ಗೆ ವೈಜ್ಞಾನಿಕವಾಗಿ ಪರಿಹಾರ ಕಂಡುಕೊಳ್ಳಲು ಕೃಷಿ ವಿಶ್ವವಿದ್ಯಾಲಯಗಳು ಸೋತಿವೆ. ಅಡಿಕೆ ಬೆಳೆಗೆ ಪ್ರತ್ಯೇಕ ಮಂಡಳಿಯ ಅಗತ್ಯವಿದೆ. ಹಳದಿ ಎಲೆ ರೋಗದಿಂದ ಸಂಪೂರ್ಣ ಹಾನಿಗೊಳಗಾದ ಅಡಿಕೆಬೆಳೆ ಹಾಗೂ ಬಿಸಿಲಿನ ತಾಪದಿಂದ ಸಂಪೂರ್ಣ ಒಣಗಿದ ತೋಟಗಳ ಬಗ್ಗೆ ಇಲಾಖೆಗಳು ಸಮೀಕ್ಷೆ ನಡೆಸಬೇಕು ಎಂದರು.

ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಕೆ.ಟಿ.ಗಂಗಾಧರ್ ಮಾತನಾಡಿ, 'ಅಡಿಕೆ ಹಳದಿ ಎಲೆ ರೋಗದ ಬಗ್ಗೆ ಇನ್ನೂ ಸಂಶೋಧನೆ ನಡೆದಿಲ್ಲ. ರೈತರು ಮಾರುಕಟ್ಟೆ ಕೌಶಲದ ಕಡೆ ಗಮನ ನೀಡಬೇಕು. ಹಸಿರು ಕ್ರಾಂತಿಯ ಬಳಿಕ ಆಹಾರ ಉತ್ಪಾದನೆಯಲ್ಲಿ ಭಾರತ ಸದೃಢವಾಗಿದೆ. ಜಾಗತಿಕ ಒಪ್ಪಂದದ ಬಳಿಕ ರೈತಾಪಿ ವರ್ಗವು ಸವಾಲು ಸ್ವೀಕರಿಸಬೇಕಾಗಿದೆ. ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮತ್ತು ವಿತರಣೆ ಮಾಡುವ ತಂತ್ರಗಾರಿಕೆಯಲ್ಲಿ ಸೋತಿದೆ. ಭಾರತ ದೇಶದ ಜಿಡಿಪಿಯಲ್ಲಿ ರೈತಾಪಿ ವರ್ಗದ ಪಾಲು ಬಹುಮುಖ್ಯ' ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ವೈಶಾಲಿ ಮಾತನಾಡಿ, 'ರೈತರು ಬೆಳೆಯ ತಾಂತ್ರಿಕತೆಯ ಹೆಚ್ಚು ಗಮನ ನೀಡಬೇಕು. ಬೆಳೆಗೆ ರೈತನೇ ಬೆಲೆ ನಿರ್ಧರಿಸುವಂತಾಗಬೇಕು. ಆಗ ಕೃಷಿಕರು ಸ್ವಾವಲಂಬನೆ ಹೊಂದಲು ಸಾಧ್ಯ' ಎಂದರು.

ಕೃಷಿಗೆ ಸಂಬಂಧಿಸಿದ ಕಿರುಹೊತ್ತಿಗೆಯನ್ನು ಕೆ.ಟಿ.ಗಂಗಾಧರ್ ಬಿಡುಗಡೆ ಮಾಡಿದರು. ಕೃಷಿಬೆಲೆ ಆಯೋಗದ ರೈತ ಪ್ರತಿನಿಧಿ ಹನುಮನಗೌಡ ಬೆಳಗುರ್ಕಿ, ಜಿಲ್ಲಾ ತೋಟಗಾರಿಕಾ ಉಪ ನಿರ್ದೇಶಕಿ ಪೂರ್ಣಿಮಾ, ನಬಾರ್ಡ್ ಅಧಿಕಾರಿ ಪ್ರಕಾಶ್, ಭಾರತೀಯ ತೋಟಗಾರಿಕಾ ಸಂಸ್ಥೆಯ ಡಾ.ವಿಜಯ ಕುಮಾರ್, ಮಡಿಕೇರಿ ಸಾಂಬಾರು ಸಂಶೋಧನಾ ಸಂಸ್ಥೆಯ ಡಾ.ಅಂಕೇಗೌಡ, ಆಯೋಗದ ಡಾ.ಪರಮೇಶ್ವರಪ್ಪ, ಕಾಂಗ್ರೆಸ್ ಕಿಸಾನ್ ಘಟಕದ ರಾಜ್ಯ ಅಧ್ಯಕ್ಷ ಸಚಿನ್ ಮೀಗ, ಯಡಗೆರೆ ಸುಬ್ರಮಣ್ಯ, ಪ್ರಗತಿಪರ ರೈತರಾದ ತಲವಾನೆ ಪ್ರಕಾಶ್, ಕೆಂಜಿಗೆ ಕೇಶವ್, ಕೊಪ್ಪ ಮಹಾಬಲರಾವ್ ಇದ್ದರು.



ಶೃಂಗೇರಿ ತಾಲ್ಲೂಕಿನ ಆನೆಗುಂದದ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಸೋಮವಾರ 'ಅಡಿಕೆ ಮತ್ತು ಉಪಬೆಳೆಗಳಿಗೆ ಆಧುನಿಕ ಮಾರುಕಟ್ಟೆ ವಿಧಗಳು' ಕುರಿತ ತಾಂತ್ರಿಕ ಕಾರ್ಯಾಗಾರದಲ್ಲಿ ರಾಜ್ಯದ ಕೃಷಿಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಮಾತನಾಡಿದರು.

### ಜನಪ್ರತಿನಿಧಿಗಳನ್ನು ಆಹ್ವಾನಿಸಿ

ಶಿಷ್ಟಾಚಾರದ ಪ್ರಕಾರ ಸಭೆಗೆ ಶಾಸಕರು ಅಧ್ಯಕ್ಷರಾಗಿ ಬರಬೇಕಿತ್ತು. ಆದರೆ, ಅವರಿಗೆ ಆಹ್ವಾನ ನೀಡುವ ಸೌಜನ್ಯವನ್ನು ಸಂಘಟಕರು ತೋರಿಸಲಿಲ್ಲ. ಶಾಸಕರು ಸಭೆಯಲ್ಲಿ ಭಾಗವಹಿಸಿದರೆ ಇಲ್ಲಿ ಚರ್ಚಿಸಿದ ವಿಚಾರಗಳನ್ನು ವಿಧಾನಸಭೆಯಲ್ಲಿ ಚರ್ಚಿಸಲು ಅನುಕೂಲವಾಗುತ್ತಿತ್ತು. ಅಧಿಕಾರಿಗಳು ಇಲ್ಲಿ ಭಾಗವಹಿಸಿದ್ದಾರೆ. ಮುಂದಿನ ದಿನಗಳಲ್ಲಿ ಆಯೋಗವು ಜನಪ್ರತಿನಿಧಿಗಳನ್ನು ಆಹ್ವಾನಿಸಬೇಕು ಎಂದು ಶೃಂಗೇರಿಯ ಜಿಲ್ಲಾ ಪಂಚಾಯಿತಿ ಸದಸ್ಯ ಬಿ.ಶಿವಶಂಕರ್ ಒತ್ತಾಯಿಸಿದರು.

### ದೋರನಾಳು ದೇವಸ್ಥಾನಗಳ ದಶಮಾನೋತ್ಸವ: ರಂಭಾಪುರಿ ಶ್ರೀ ಹೇಳಿಕೆ

# ಚಾರಿತ್ರ್ಯ ನಿರ್ಮಾಣಕ್ಕೆ ಸಂಸ್ಕಾರ ಅವಶ್ಯ



ಸುದ್ದಿ 2 ನಿ

## ಹುಬ್ಬಳ್ಳಿ- ಬೆಂಗಳೂರು ನಡುವೆ ಹೊಸ ರೈಲು

ಕಡೂರು: ಹುಬ್ಬಳ್ಳಿ ಬೆಂಗಳೂರು- ಮೈಸೂರು (17325/17326) ನಡುವೆ ಬುಧವಾರದಿಂದ ನೈರುತ್ಯ ರೈಲ್ವೆಯು ಹೊಸ ದೈನಂದಿನ ಎಕ್ಸ್‌ಪ್ರೆಸ್ ರೈಲುಗಾಡಿ ಸಂಚಾರವನ್ನು ಪ್ರಾರಂಭಿಸಲಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ಹುಬ್ಬಳ್ಳಿಯಿಂದ (17325) ಬೆಳಿಗ್ಗೆ 8 ಗಂಟೆಗೆ ಹೊರಡುವ ಈ ರೈಲು ಅಜ್ಜಂಪುರಕ್ಕೆ ಮಧ್ಯಾಹ್ನ 12-24ಕ್ಕೆ, ದೇವನೂರು ನಿಲ್ದಾಣಕ್ಕೆ 12-50ಕ್ಕೆ, ಕಡೂರು ನಿಲ್ದಾಣವನ್ನು 1 ಗಂಟೆಗೆ ತಲುಪಲಿದೆ. ಅರಸೀಕೆರೆ,

## ಮಾನಸಿ



ತರೀಕೆರೆ: ಭದ್ರಾ ನ ...